# ಹಿರಿಯ ಸಿವಿಲ್ ನ್ಯಾಯಾಧೀಶರು  ಮತ್ತು ಜೆ.ಎಂ.ಎಫ್.ಸಿ., ಚಳ್ಳಕೆರೆ.

## ಸಿ.ಸಿ ನಂ.740/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ತಿಮ್ಮಣ್ಣ | ಪಿ.ಡಬ್ಲ್ಯೂಃ 7 |
| ತಂದೆಯ ಹೆಸರು | : | ಹನುಮಂತಪ್ಪ | ಸಿ.ಡಬ್ಲ್ಯೂಃ 22 |
| ವಯಸ್ಸು | : | ಸು. 59 ವರ್ಷ | |
| ಉದ್ಯೋಗ | : | ಸಿ. ಪಿ.ಐ., ಬಡಾವಣೆ ವೃತ್ತ ಚಿತ್ರದುರ್ಗ | |
| ವಾಸ | : | ಚಿತ್ರದುರ್ಗ. | |

ದಿನಾಂಕ 13.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 19.01.2017 ರಿಂದ 19.07.2019 ರ ವರೆಗೆ ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಸಿ.ಪಿ.ಐ,, ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ .

ದಿಃ 23.05.2018 ರಂದು ಈ ಕೇಸಿನ ಕಡತವನ್ನು ಚಾಸ. 21 ಸತೀಶ್ ನಾಯ್ಕ ರವರಿಂದ ಮುಂದಿನ ತನಿಖೆಗಾಗಿ  ಪಡೆದುಕೊಂಡಿರುತ್ತೇನೆ.

ನಂತರ ಚಳ್ಳಕೆರೆಯ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಶವ ಪಂಚನಾಮೆಯನ್ನು ಈಗಾಗಲೇ ನಿಪಿ 14 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು 14ಎ ಎಂದು ಗುರುತಿಸಲಾಯಿತು. ಅದೇ ದಿವಸ ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ 7 ಕಿರೀಟಪ್ಪ ಮತ್ತು  ಚಾಸಾ 8 ಜಯರಾಮ್ ರವರ ಸಮಕ್ಷಮದಲ್ಲಿ ಚಾಸಾ 9 ಮಹಾಂತೇಶ್ ರವರು ಸ್ಥಳವನ್ನು ತೋರಿಸಿದ ಮೇರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿ ಗುರುತಿಸಿದ ಸ್ಥಳ ನಕಾಶೆಯನ್ನು ಈಗಾಗಲೇ ನಿಪಿ 7 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು  7ಸಿ ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಸ್ಥಳ ನಕಾಶೆಯನ್ನು ಕೂಡ ತೆಗೆಸಿರುತ್ತೇನೆ. ಸ್ಥಳ ನಕಾಶೆಯನ್ನು ನಿಪಿ 25 ಎಂದು ಸಾಕ್ಷಿಯ ಸಹಿಯನ್ನು 25ಎ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಒಂದು ಛಾಯಾಚಿತ್ರವನ್ನು ಕೂಡ ತೆಗೆಸಿರುತ್ತೇನೆ. ಸಾಕ್ಷಿ ಗುರುತಿಸಿದ ಛಾಯಾಚಿತ್ರವನ್ನು ಈಗಾಗಲೇ ನಿಪಿ 9 ಎಂದು ಗುರುತಿಸಲಾಗಿದೆ.

ನಂತರ ಸದರಿ ಪಂಚರ ಸಮಕ್ಷಮವೇ ಠಾಣಾ ಆವರಣದಲ್ಲಿ ಅಪಘಾತ ಪಡಿಸಿದ ಬಸ್ ಮತ್ತು ಅಪಘಾತಕ್ಕೀಡಾದ ಮೋಟಾರ್ ಸೈಕಲ್ ಗಳ ತಪಾಸಣಾ ವರದಿಯನ್ನು ತಯಾರಿಸಿದೆನು. ಸದರಿ ವಾಹನ ಪರಿಶೀಲನಾ ಪಂಚನಾಮೆಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 8 ಎಂದು ಸಾಕ್ಷಿಯ ಸಹಿಯನ್ನು 8 ಸಿ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಬಸ್ ನ ಮತ್ತು ಮೋಟಾರ್ ಸೈಕಲ್ ನ ಛಾಯಾಚಿತ್ರಗಳನ್ನು ತೆಗೆಸಿರುತ್ತೇನೆ. ಬಸ್ ನ 4 ಛಾಯಾಚಿತ್ರಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿಪಿ 10 ರಿಂದ 13 ಎಂದು ಮತ್ತು ಮೋಟಾರ್ ಸೈಕಲ್ ನ 4 ಛಾಯಾಚಿತ್ರಗಳನ್ನು ಈಗಾಗಲೇ ನಿಪಿ 2 ರಿಂದ 5 ಎಂದು ಗುರುತಿಸಲಾಗಿದೆ. ಅದೇ ದಿವಸ ಸಾಕ್ಷಿದಾರರಾದ ಚಾಸಾ 9 ರಿಂದ 11 ರವರಾದ ಮಹಾಂತೇಶ್ ಬಸವರಾಜ ಮತ್ತು ಹನುಮಂತಪ್ಪ ಹಾಗೂ ಸಿಬ್ಬಂದಿಗಳಾದ ಚಾಸಾ 18 ರಿಂದ 21 ರವರಾದ ತಿಮ್ಮಪ್ಪ, ರಂಗಸ್ವಾಮಿ, ಚಂದ್ರನಾಯ್ಕು ಮತ್ತು ಸತೀಶ್ ನಾಯ್ಕು ರವರ ಹೇಳಿಕೆಗಳನ್ನು ಪಡೆದುಕೊಂಡೆನು.

ದಿನಾಂಕ 25.05.2018 ರಂದು ಆರೋಪಿ ವಿರೇಶ್ ಠಾಣೆಗೆ ಹಾಜರಾದ ಮೇರೆಗೆ ಆತನ ವಿರುದ್ಧ ದಸ್ತಗಿರಿ ಕ್ರಮವನ್ನು ಜರುಗಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಬಸ್ ನ ವಾರಸುದಾರರಾದ ಚಾಸಾ 12 ರವರು ಹಾಜರಾಗಿ ದಾಖಲಾತಿಗಳನ್ನು ಸಲ್ಲಿಸಿದ ಆಧಾರದ ಮೇಲೆ ಅವರಿಂದ ಸೂಕ್ತ ಮುಚ್ಚಳಿಕೆಯನ್ನು ಪಡೆದುಕೊಂಡು ಬಸ್ ಅನ್ನು ಅವರ ಮಧ್ಯಂತರ ವಶಕ್ಕೆ ನೀಡಿರುತೇನೆ. ಅವರಿಗೆ ಮೋಟಾರ್ ವಾಹನ ಕಾಯ್ದೆ ಕಲಂ 133 ರಡಿಯಲ್ಲಿ ನೋಟಿಸನ್ನು ನೀಡಿ ಅವರ ಉತ್ತರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ಮುಚ್ಚಳಿಕೆ ಪತ್ರವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 21 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು 21 ಎ ಎಂದು ಗುರುತಿಸಲಾಯಿತು. ಮೋಟಾರ್ ವಾಹನ ಕಾಯ್ದೆ ಕಲಂ 133 ರ ನೋಟಿಸನ್ನು ಈಗಾಗಲೇ ನಿಪಿ 22 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು 22 ಎ ಎಂದು ಗುರುತಿಸಲಾಯಿತು. ಚಾಸಾ 12 ಪ್ರಭು ರವರು ನೀಡಿದ ಉತ್ತರವನ್ನು ಈಗಾಗಲೇ ನಿಪಿ 23 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು 23 ಎಂದು ಗುರುತಿಸಲಾಯಿತು. ಚಾಸಾ 12 ಪ್ರಭುರವರಿಂದ ಆರೋಪಿಯ ಕರ್ತವ್ಯ ದೃಡಿಕರಣ ಪತ್ರವನ್ನು ಕೂಡ ಪಡೆದಿರುತ್ತೇನೆ. ಸದರಿ ದಾಖಲಾತಿಯನ್ನು ಈಗಾಗಲೇ ನಿಪಿ 20 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು 20 ಎ ಎಂದು ಗುರುತಿಸಲಾಯಿತು.

ದಿನಾಂಕ 12.06.2018 ರಂದು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯಿಂದ ಗಾಯಾಳು ಸುನೀಲ್ ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡೆನು. ಸದರಿ ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ 16 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು 16 ಎ ಎಂದು ಗುರುತಿಸಲಾಯಿತು.

ದಿನಾಂಕ 13.06.2018 ರಂದು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯಿಂದ ಮೃತ ಮೈಲಾರಿ ರವರ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿದೆನು. ಶವ ಪರೀಕ್ಷಾ ವರದಿಯನ್ನು ಈಗಾಗಲೇ ನಿಪಿ 15 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು 15 ಎ ಎಂದು ಗುರುತಿಸಲಾಯಿತು. ಅದೇ ದಿವಸ ಆರ್ ಟಿ ಒ ಕಚೇರಿಯಿಂದ ವಾಹನ ತಪಸಣಾ ವರದಿಯನ್ನು ಪಡೆದುಕೊಂಡೆನು. ಸಾಕ್ಷಿ ಗುರುತಿಸಿದ ವಾಹನ ತಪಸಣಾ ವರದಿಯನ್ನು ಈಗಾಗಲೇ ನಿಪಿ 17 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು 17 ಎ ಎಂದು ಗುರುತಿಸಲಾಯಿತು. ಅದೇ ದಿವಸ ಮೃತ ಮೈಲಾರಿ ರವರ ತಂದೆಯಾದ ಚಾಸಾ 5 ಹೊನ್ನೂರಪ್ಪ ರವರು ಠಾಣೆಗೆ ಹಾಜರಾಗಿ ಅಪಘಾತಕ್ಕೀಡಾದ ವಾಹನಗಳ ದಾಖಲಾತಿಗಳನ್ನು ನೀಡಿದ್ದು ಅವುಗಳನ್ನು ಪರಿಶೀಲಿಸಿ ಮೋಟಾರ್ ಸೈಕಲ್ ಅನ್ನು ಅವರ ಮಧ್ಯಂತರ ವಶಕ್ಕೆ ನೀಡಿರುತೇನೆ. ಸಾಕ್ಷಿ ಗುರುತಿಸಿದ ಮುಚ್ಚಳಿಕೆ ಪತ್ರವನ್ನು ನಿಪಿ 26 ಎಂದು ಸಾಕ್ಷಿಯ ಸಹಿಯನ್ನು 26 ಎ ಎಂದು ಗುರುತಿಸಲಾಯಿತು. ಮೃತ ವ್ಯಕ್ತಿಯ ತಂದೆ ಹೊನ್ನೂರಪ್ಪ ರವರಿಗೆ ನಾನು ಮೋಟಾರ್ ವಾಹನ ಕಾಯ್ದೆ ಕಲಂ 133 ರಡಿಯಲ್ಲಿ ನೋಟಿಸನ್ನು ನೀಡಿದ್ದು ಅದಕ್ಕೆ ಅವರ ಉತ್ತರವನ್ನು ಪಡೆದುಕೊಂಡಿರುತ್ತೇನೆ. ನೋಟಿಸನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 27 ಎಂದು ಸಾಕ್ಷಿಯ ಸಹಿಯನ್ನು 27 ಎ ಎಂದು ಗುರುತಿಸಲಾಯಿತು. ಹೊನ್ನೂರಪ್ಪ ರವರು ನೀಡಿದ್ದು ಉತ್ತರವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 28 ಎಂದು ಸಾಕ್ಷಿಯ ಸಹಿಯನ್ನು 28 ಎ ಎಂದು ಗುರುತಿಸಲಾಯಿತು. ಹೊನ್ನೂರಪ್ಪ ರವರಿಂದ ಅವರು ಮೃತನ ವಾರಸುದಾರರು ಎನ್ನುವ ಕುರಿತು ಅವರ ಪ್ರಮಾಣ ಪತ್ರವನ್ನು ಕೂಡ ಪಡೆದಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ 29 ಎಂದು ಸಾಕ್ಷಿಯ ಸಹಿಯನ್ನು 29 ಎ ಎಂದು ಗುರುತಿಸಲಾಯಿತು. ಗಾಯಾಳು ಸುನೀಲ್ ರವರಿಗೆ ಯಾವುದೇ ಚಾಲನಾ ಪರವಾನಿಗೆ ಪತ್ರ ಇರದೇ ಇರುವ ಕಾರಣ ಆತನಿಗೆ ದಂಡ ವಿಧಿಸಿ ದಂಡವನ್ನು ಪಾವತಿ ಮಾಡಿಸಿಕೊಂಡಿರುತ್ತೇನೆ. ಆ ಬಗ್ಗೆ ರಸೀದಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 30 ಎಂದು ಸಾಕ್ಷಿಯ ಸಹಿಯನ್ನು 30 ಎ ಎಂದು ಗುರುತಿಸಲಾಯಿತು. ಚಾಸಾ 5 ಹೊನ್ನೂರಪ್ಪ ರವರ ಮುಂದುವರೆದ ಹೇಳಿಕೆಯನ್ನು ಕೂಡ ನಾನು ಪಡೆದುಕೊಂಡೆನು. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತನ ವಿರುದ್ಧ ಆರೋಪ ಸಾಬೀತಾದ್ದರಿಂದ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನಾನು ದಸ್ತಗಿರಿ ಮಾಡಿದ ವ್ಯಕ್ತಿ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆಗಿರುತ್ತಾನೆ.

**ಪಾಟೀ ಸವಾಲು ಃ ಆರೋಪಿತನ ಪರ ಶ್ರೀ ಕೆ ಎಂ ಎನ್ ವಕೀಲರಿಂದಃ**

ನಾನು ಅಪಘಾತವಾದ ಸ್ಥಳ ಕ್ಕೆ ಭೇಟಿ ನೀಡಿ ಸ್ಥಳ ಪಂಚನಾಮೆ ಜರುಗಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳ ನಕಾಶೆಯಲ್ಲಿ ಯಾವುದೇ ಸಾಕ್ಷಿದಾರರ ಸಹಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಸ್ಥಳ ನಕಾಶೆಯನ್ನು ಮತ್ತು ಸ್ಥಳ ಪಂಚನಾಮೆಯನ್ನು ಠಾಣೆಯಲ್ಲಿಯೇ ನಾನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ ಆರೋಪಿ ಯಾವುದೇ ತಪ್ಪನ್ನು ಮಾಡಿಲ್ಲ ಎಂದು ಕಂಡುಬಂದರೂ ಕೂಡ ನಾನು ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ.